JANUARY 02, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಪ್ರಸಕ್ತ ಜನವರಿ ಮಾಸದಲ್ಲಿ,** 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಮಾಸಿಕ ಅಭಿಯಾನಕ್ಕೆ, ನಿನ್ನೆ ರಾಜ್ಯಾದ್ಯಂತ ಚಾಲನೆ ನೀಡಲಾಗಿದೆ. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ, ಸದಸ್ಯ ಕಾರ್ಯದರ್ಶಿ, ಶಶಿಧರ ಶೆಟ್ಟಿ ಬೆಂಗಳೂರಿನಲ್ಲಿ ಮಾಹಿತಿ ನೀಡಿ, ರಸ್ತೆ ಸಂಚಾರ ನಿಯಮಗಳು ಹಾಗೂ ರಸ್ತೆಗಳಲ್ಲಿ ಸುರಕ್ಷಿತ ಸಂಚಾರ ಕುರಿತು, ಜನ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.  ಅತಿಯಾದ ವೇಗ, ಕುಡಿದ ಅಮಲಿನಲ್ಲಿ ವಾಹನ ಚಲಾವಣೆ, ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನ ಸವಾರಿ, ಸಂಚಾರ ನಿಯಮಗಳ ಉಲ್ಲಂಘನೆ, ಅಜಾಗರೂಕತೆಯ ಚಾಲನೆ ಮತ್ತು ಅರಿವಿನ ಕೊರತೆ, ಅಪಘಾತಗಳಿಗೆ ಪ್ರಮುಖ ಕಾರಣ. ಅಪಘಾತ ದರವನ್ನು ಶೂನ್ಯಕ್ಕಿಳಿಸಲು, ಅಭಿಯಾನ ಸಹಕಾರಿಯಾಗಲಿದೆ, ಎಂದರು.

<><><>

**ಹೊಸ ವರ್ಷ 2026 ರಲ್ಲಿ,** ರಾಜ್ಯದ ಜನತೆಗೆ, ಸರ್ಕಾರದ ಸೇವೆಗಳನ್ನು, ಸಕಾಲಿಕವಾಗಿ, ಮಾನವೀಯತೆಯಿಂದ, ಜಾತ್ಯತೀತ ಮನೋಭಾವದಿಂದ ತಲುಪಿಸುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಿಗಳನ್ನು ಕೋರಿದ್ದಾರೆ. ಹೊಸ ವರ್ಷದ ಮೊದಲ ದಿನ, ಬೆಂಗಳೂರಿನಲ್ಲಿ, ಎಲ್ಲ ಹಿರಿಯ ಅಧಿಕಾರಿಗಳೊಂದಿಗೆ, ಅವರು ಸಭೆ ನಡೆಸಿದರು. ಹೊಸ ವ ್ಷದಲ್ಲಿ, ಜನಪರ ಕೆಲಸಗಳನ್ನು ನಿರ್ವಹಿಸಲು, ಹೊಸ ಉತ್ಸಾಹದಿಂದ ಅಧಿಕಾರಿಗಳು ಶ್ರಮಿಸಬೇಕು. ಸರ್ಕಾರದ ಅಧಿಕಾರಾವಧಿ, ಕೇವಲ 5 ವರ್ಷಗಳಾದರೆ, ಅಧಿಕಾರಿಗಳು 30 ರಿಂದ 40 ವ ್ಷ ಅಧಿಕಾರದಲ್ಲಿರುತ್ತಾರೆ. ಜನ ನೆನಪಿಡುವಂಥ ಅಧಿಕಾರಿ ಗಳಾಗುವಂತೆ, ಮುಖ್ಯಮಂತ್ರಿ ಕೋರಿದರು.

<><><>

**ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ** ಸಚಿವಾಲಯದ, "ತೇರೆ ಮೇರೆ ಸಪ್ನೆ" ಯೋಜನೆ ಅಡಿ, ಬೀದರನ ಬ್ರಿಮ್ಸ್ ಆಸ್ಪತ್ರೆ ಆವರಣದಲ್ಲಿ, ಆರಂಭಗೊಂಡ ರಾಜ್ಯದ ಮೊದಲ "ವಿವಾಹ ಪೂರ್ವ, ಸಂವಾದ ಕೇಂದ್ರ" ವನ್ನು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಉದ್ಘಾಟಿಸಿದರು. ಈ ಸಂದರ್ಭದಲ್ಲಿ, ತೇರೆ ಮೇರೆ ಸಪ್ನೆ ಯೋಜನೆ ಮಾಹಿತಿ ನೀಡುವ, ಕಿರು ಹೊತ್ತಗೆ ಹಾಗೂ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯ 10ನೇ ವಾರ್ಷಿಕೋತ್ಸವದ ನೆನಪಿಗಾಗಿ ಭಿತ್ತಿ ಪತ್ರ ಅನಾವರಣಗೊಳಿಸಲಾಯಿತು. ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮಾತನಾಡಿ, ಸಂವಾದ ಕೇಂದ್ರದ ಮೂಲಕ, ನವ ಜೋಡಿಗಳಿಗೆ, ಕೌಟುಂಬಿಕ ಸಾಮರಸ್ಯದ ಸಲಹೆಗಳನ್ನು ನೀಡಲಾಗುವುದು ಎಂದರು.

<><><>

**ಗದಗ ನಗರದ ಜಿಲ್ಲಾಡಳಿತ ಭವನದಲ್ಲಿ,** ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮ ಜರುಗಿತು. ಅಪರ ಜಿಲ್ಲಾಧಿಕಾರಿ ಡಾಕ್ಟರ ದುರಗೇಶ್, ಅಮರಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಪು ್ಪಾರ್ಚನೆ ಸಲ್ಲಿಸಿ, ಗೌರವಿಸಿದರು. ಸುರೇಶ ಅಕ್ಕಸಾಲಿಗರ ಅವರು, ಅಮರಶಿಲ್ಪಿ ಜಕಣಾಚಾರಿಯವರ ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭ ಹಿರಿಯ ಶಿಲ್ಪಿಗಳನ್ನು ಸನ್ಮಾನಿಸಿ, ಗೌರವಿಸಲಾಯಿತು.

<><><>

**ಬಳ್ಳಾರಿಯಲ್ಲಿ, ಮಹರ್ಷಿ ವಾಲ್ಮೀಕಿ** ಪುತ್ಥಳಿ ಅನಾವರಣ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆ ಸಂದರ್ಭ, ಎರಡು ಬಣಗಳ ಮಧ್ಯೆ ವಾಗ್ವಾದ, ಗಲಾಟೆ ನಡೆದು, ಗುಂಡೇಟಿನಿಂದ ಓರ್ವ ಯುವಕ ಮೃತಪಟ್ಟ ದುರ್ಘಟನೆ ಸಂಭವಿಸಿದೆ. ಕಲ್ಲು ತೂರಾಟದಲ್ಲಿ ಪೊಲೀಸರು ಸೇರಿದಂತೆ ಅನೇಕರು ಗಾಯಗೊಂಡಿದ್ದಾರೆ. ಈ ಘಟನೆ ಹಿನ್ನೆಲೆ, ಗಂಗಾವತಿ ಶಾಸಕ ಜನಾರ್ಧನರೆಡ್ಡಿ, ಮಾಜಿ ಶಾಸಕರಾದ ಸೋಮಶೇಖರ ರೆಡ್ಡಿ, ಬಿ. ಶ್ರೀರಾಮುಲು ಸೇರಿದಂತೆ, 11 ಜನರ ಮೇಲೆ ಬ್ರೂಸ್ ಪೇಟೆ ಠಾಣೆಯಲ್ಲೆ ಕೇಸು ದಾಖಲಾಗಿದೆ.

<><><>

**ರಾಷ್ಟ್ರೀಯ ಕೈಮಗ್ಗ ಮೇಳ –2026**, 'ಗಾಂಧಿ ಬುನಕರ್ ಮೇಲಾ' ಇಂದಿನಿಂದ, 15ನೇ ತಾರೀಖಿನ ವರೆಗೆ, ಬೆಂಗಳೂರಿನ ಮಹಾಲಕ್ಷ್ಮಿಪುರಂ ಲೇಔಟ್‌ನ, ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ಆಯೋಜಿತವಾಗಿದೆ. ಈ ಮಧ್ಯಾಹ್ನ 12.30ಕ್ಕೆ ಕೇಂದ್ರ ಜವಳಿ ಖಾತೆ ಸಚಿವ ಗಿರಿರಾಜ್ ಸಿಂಗ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೈಮಗ್ಗ ಮೇಳ ಉದ್ಘಾಟಿಸಲಿದ್ದಾರೆ.

<><><>

**ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ** (ಕೆಯುಡಬ್ಲ್ಯೂಜೆ) ಹೊರ ತಂದಿರುವ ವಾರ್ಷಿಕ ಕ್ಯಾಲೆಂಡರನ್ನು, ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಿ, ಶುಭ ಹಾರೈಸಿದರು.

<><><>

**ಉತ್ತರ ಕನ್ನಡ ಜಿಲ್ಲೆ, ಕಾರವಾರದ** ಸಮುದ್ರ ದ್ವೀಪದಲ್ಲಿರುವ, ಕೂರ್ಮಗಢ ನರಸಿಂಹ ದೇವರ ವಾರ್ಷಿಕ ಜಾತ್ರಾ ಮಹೋತ್ಸವ ನಾಳೆ ಜರುಗಲಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ತಾಲೂಕಾಡಳಿತ ಸುರಕ್ಷತಾ ಕ್ರಮ ಕೈಗೊಂಡಿದೆ, ದ್ವೀಪಕ್ಕೆ ತೆರಳುವ ಪ್ರತಿಯೊಬ್ಬರು ಜೀವ ರಕ್ಷಕ ಕವಚ ಧರಿಸಿ, ದೋಣಿಯಲ್ಲಿ ಸಂಚರಿಸುವುದು ಕಡ್ಡಾಯಗೊಳಿಸಲಾಗಿದೆ ಎಂದು ಕಾರವಾರ ತೆಹಶೀಲ್ದಾರರು ತಿಳಿಸಿದ್ದಾರೆ.

<><><>

**ಹೊಸ ವರ್ಷದ ಪ್ರಯುಕ್ತ,** ತೋಟಗಾರಿಕೆ ಇಲಾಖೆ, ಬೆಂಗಳೂರಿನ ವಿಧಾನಸೌಧ ಆವರಣದ ಕೈ ತೋಟದಲ್ಲಿ, ಲಾಲ್ ಬಹಾದ್ದೂರ್ ಶಾಸ್ತ್ರಿ ಪ್ರತಿಮೆ ಸಮೀಪ ಆಯೋಜಿಸಿದ್ದ, ಸಸಿ ನೆಡುವ ಕಾರ್ಯಕ್ರಮದಲ್ಲಿ, ವಿಧಾನಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಭಾಗವಹಿಸಿ, ಗಂಧದ ಸಸಿ ನೆಟ್ಟರು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>